# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-8506/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:17-08-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀಮತಿ.ಆಲಾವತಿ ಶಿಕ್ಷಕರು, ಸರ್ಕಾರಿ ಬಾಲಕಿಯರ ಪಿ.ಯು. ಕಾಜೇಜು, ಶಿಕ್ಷಕರ ಭವನದ ಹಿಂದುಗಡೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀಮತಿ.ಆಲಾವತಿ ಶಿಕ್ಷಕರು, ಸರ್ಕಾರಿ ಬಾಲಕಿಯರ ಪಿ.ಯು. ಕಾಜೇಜು, ಶಿಕ್ಷಕರ ಭವನದ ಹಿಂದುಗಡೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತಿ, ಅರಕಲಗೂಡು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಅರಕಲಗೂಡು ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗದಲ್ಲಿರುವ ವಿನಾಯಕನಗರ ಕೋಟೆಯಲ್ಲಿ ಸಾರ್ವಜನಿಕ ಮಕ್ಕಳ ಉದ್ಯಾನವನಕ್ಕೆಂದು ಮೀಸಲಾಗಿಟ್ಟಿದ್ದ ಸ್ಥಳವನ್ನು ಸ್ವಾತಿ ಗೋಪಾಲ ಎನ್ನುವ ವ್ಯಕ್ತಿ ಅತಿಕ್ರಮಿಸಿ ವಾಸದ ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ನಕ್ಷೆಯ ಪ್ರಕಾರ ಈ ಸ್ಥಳವು ಟಾಟ್ ಲಾಟ್ ಅಂತ ಗುರುತಿಸಲಾಗಿದೆ. ಆದ್ದರಿಂದ ಎದುರುದಾರರಿಗೆ ದೂರನ್ನು ಸಲ್ಲಿಸಲಾಗಿತ್ತು ಆದರೆ ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲ ಅಂತ ದೂರು ಸಲ್ಲಿಸಿದ್ದಾರೆ.

3. ಈ ದೂರನ್ನು ಎಸ್.ಪಿ., ಕರ್ನಾಟಕ ಲೋಕಾಯುಕ್ತ, ಹಾಸನ ಇವರಿಗೆ ತನಿಖೆಗಾಗಿ ವಹಿಸಿ ವರದಿ ಸಲ್ಲಿಸುವಂತೆ ಆದೇಶಿಸಲಾಗಿತ್ತು, ಅದರಂತೆ, ತನಿಖೆ ಮಾಡಿ ವರದಿಯನ್ನು ಸಲ್ಲಿಸಿದ್ದು, ಅದನ್ನು ಪರಿಶೀಲನೆ ಮಾಡಿದಾಗ, ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ ಅರಕಲಗೂಡು ರವರು ವಿವರಣೆಯಲ್ಲಿ ಪಟ್ಟಣ ಪಂಚಾಯತಿಗೆ ಸೇರಿದ ಸ. ನಂ: 3/1ಬಿ ರಲ್ಲಿ ವಸತಿ ವಿನ್ಯಾಸಕ್ಕೆ ಅನುಮೋದನೆ ಕೋರಿದ ಸ್ಥಳವು ಟಾಟ್-ಲಾಟ್ ಅಂತ ಇದ್ದುದ್ದರಿಂದ

ಎ.ಪಿ.ರಂಗನಾಥ ಎನ್ನುವವರು ಪಟ್ಟಣ ಪಂಚಾಯತಿಗೆ ಅರ್ಜಿ ಸಲ್ಲಿಸಿ ವಿನ್ಯಾಸವನ್ನು ಪುನರ್ ಪರಿಶೀಲಿಸಿ ಕೊಡುವಂತೆ ಕೋರಿದ್ದರಿಂದ ಪಟ್ಟಣ ಪಂಚಾಯ್ತಿಯಿಂದ ದಿನಾಂಕ: 5.3.2003ರಂದು ವಿನ್ಯಾಸವನ್ನು ಪರಿಷ್ಕರಿಸುವಂತೆ ಶಿಫಾರಸ್ಸು ಮಾಡಿ ನಗರ ಯೋಜನೆ ಇಲಾಖೆಗೆ ಪತ್ರ ಬರೆಯಲಾಗಿದೆ. ಈ ಕೋರಿಕೆಯ ಮೇರೆಗೆ ನಗರ ಯೋಜನೆ ಇಲಾಖೆಯು ಟಾಟ್‌-ಲಾಟ್‌ ಎಂಬ ನಿವೇಶನವನ್ನು ವಸತಿ ವಿನ್ಯಾಸವನ್ನಾಗಿ ಮಾರ್ಪಡಿಸಿದ್ದಾರೆ. ಆದ್ದರಿಂದ ಇದು ಸಾರ್ವಜನಿಕ ಮಕ್ಕಳ ಉದ್ಯಾನವನ ಆಗಿರುವುದಿಲ್ಲ ಎ.ಪಿ.ರಂಗನಾಥ ರವರು ಮೊದಲ ಮಾಲೀಕರಾಗಿದ್ದು ಅವರ ಕೋರಿಕೆಯಂತೆ ಮಾರ್ಪಾಡು ಮಾಡಲಾಗಿದೆ. ಅರಕಲಗೂಡು ತಾಲ್ಲೂಕು ಕಚೇರಿಗೆ ಕಾಂಪೌಂಡ್‌ ನಿರ್ಮಿಸುವಾಗ ನನ್ನ ಮನೆ ಪಕ್ಕ ಪಶ್ಚಿಮ ದಿಕ್ಕಿಗೆ ಕಾಲಿ ಇದ್ದ ಉದ್ಯಾನವನ ಸ್ಥಳವನ್ನು ಸೇರಿಸಿಕೊಂಡು ಕಾಂಪೌಂಡ್‌ ನಿರ್ಮಿಸಿದ್ದಾರೆ. ಹಾಲಿ ಅರಕಲಗೂಡು ತಾಲ್ಲೂಕು ಕಛೇರಿಯ ಆವರಣಕ್ಕೆ ಸೇರ್ಪಡೆಗೊಂಡಿದೆ ಅಂತ ತಿಳಿಸಿದ್ದಾರೆ.

4. ತನಿಖಾ ವರದಿಯ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ತಮಗೆ ಕೆಲವು ದಾಖಲೆಗಳ ಅವಶ್ಯಕತೆ ಇದೆ ಅವು ದೊರತನಂತರ ಪ್ರತ್ಯುತ್ತರ ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಆದರೆ ಇದುವರೆಗೆ ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ ಹಾಗೂ ಪೋನ್‌ ಕರೆ ಮಾಡಿ ತಿಳಿಸಿದರೂ ಸಹ ಯಾವುದೇ ಪ್ರತ್ಯುತ್ತರ ಸಲ್ಲಿಸಿಲ್ಲ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ನಿವೇಶನ ಸಂ: 3/1ಬಿ ಇದು ಮೂಲ ಮಾಲೀಕರಾದ ಎ.ಪಿ. ರಂಗನಾಥ ಇವರ ಹೆಸರಿನಲ್ಲಿದ್ದು ನಗರ ಯೋಜನಾ ಇಲಾಖೆಯ ದಿ: 9.3.2003ರ ಅನುಮತಿಯಂತೆ ನಕ್ಷೆ ಅನುಮೋದನೆಯಾಗಿದೆ ಅಂತ ತನಿಖಾಧಿಕಾರಿಗಳು ಸಲ್ಲಿಸಿರುವ ನಿಶಾನೆ ಡಿ ಅನುಮೋದಿತ ನಕ್ಷೆಯಲ್ಲಿದೆ. ದಿ: 11.3.2003ರಂದು ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ ಇವರಿಗೆ ನಗರ ಯೋಜನಾ ಸಹಾಯಕ ನಿರ್ದೇಶಕರು ಪತ್ರ ಬರೆದಿದ್ದು ಪರಿಷ್ಕೃತ ವಿನ್ಯಾಸವನ್ನು ತಯಾರಿಸಿ ಅನುಮೋದಿಸಲಾಗಿದೆ. ದಿನಾಂಕ: 23.1.1986 ರಲ್ಲಿ ಅನುಮೋದಿಸಿರುವ ವಿನ್ಯಾಸವು ಸ್ಥಳದಲ್ಲಿ ಸ್ವಲ್ಪ ವ್ಯತ್ಯಾಸವಾಗಿದ್ದು ಹಾಲಿ ಬೆಳವಣಿಗೆಗಳನ್ನು ಗಮನಿಸಿಕೊಂಡು ನಿಬಂಧನೆಗೆ ಒಳಪಟ್ಟ ಅನುಮೋದನೆ ಕೊಟ್ಟಿದ್ದಾರೆ. ಆದ್ದರಿಂದ, ಮಕ್ಕಳ ಉದ್ಯಾನಕ್ಕೆಂದು ಮೀಸಲಾದ ಸ್ಥಳವು ಅರಕಲಗೂಡು ತಾಲ್ಲೂಕು ಕಛೇರಿಯ ಕಾಂಪೌಂಡ ನಿರ್ಮಿಸುವಾಗ ತಾಲ್ಲೂಕು ಕಛೇರಿಯ ಆವರಣದೊಳಗೆ ಹೋಗಿದೆ ಅಂತ ವರದಿಯಿಂದ ತಿಳಿಯುತ್ತಿರುವುದರಿಂದ ತಹಶೀಲ್ದಾರ್ ರವರು ಅರಕಲಗೂಡು ಇವರಿಗೆ ಮಕ್ಕಳ ಉದ್ಯಾನವನದ ಸ್ಥಳವನ್ನು ಅಭಿವೃದ್ಧಿ ಪಡಿಸಲಾಗಿದೆಯೇ ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಲು ಸೂಚಿಸಲಾಗಿತ್ತು.

6. ಅದರಂತೆ ತಹಶೀಲ್ದಾರರು ಅರಕಲಗೂಡು ತಮ್ಮ ವರದಿಯಲ್ಲಿ ವಿವಾದಿತ ಆಸ್ತಿಯು ತಹಶೀಲ್ದಾ ಕಛೇರಿಯ ಕಂಪೌಂಡ ಒಳಗಡೆ ಬರುತ್ತದೆ. ಸದರಿ 0.1.14 ಗುಂಟೆ ಜಮೀನಿನಲ್ಲಿ ಉದ್ಯಾನವನ ನಿರ್ಮಿಸಿಲ್ಲ ಅಂತ ವರದಿ ಸಲ್ಲಿಸಿದ್ದಾರೆ. ನಂತರ ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು ಸದರಿ ಸ್ಥಳವನ್ನು ಏಕೆ ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸಿಲ್ಲ ಅಂತ ಕೇಳಲಾಗಿ, ಸರ್ಕಾರದ ಅನುಧಾನದ ಕೊರತೆಯಿಂದ ಉದ್ಯಾನವನ ಸ್ಥಳ ಅಭಿವೃದ್ಧಿಪಡಿಸಿಲ್ಲ ಅಂತ ಮಾಹಿತಿಯನ್ನು ತಿಳಿಸಿದ್ದಾರೆ.

7. ದೂರುದಾರರಿಂದ ತಹಶೀಲ್ದಾರರ ವರದಿಯ ಮೇಲೆ ಪ್ರತ್ಯುತ್ತರವನ್ನು ಕೇಳಲಾಗಿ, ಉದ್ಯಾನವನಕ್ಕೆ ಮೀಸಲಿಟ್ಟ ಸ್ಥಳದಲ್ಲಿ ಗೋಪಾಲ ಎನ್ನುವವರು ಅಕ್ರಮವಾಗಿ ಮನೆಯನ್ನು ನಿರ್ಮಿಸಿಕೊಂಡು ವಾಸವಿರುತ್ತಾರೆ ಅಂತ ಹೇಳುತ್ತಿದ್ದಾರೆ. ನಕ್ಷೆಗಳು ಪರಿಷ್ಕೃತಗೊಂಡಿರುವುದರಿಂದ ಮಕ್ಕಳ ಉದ್ಯಾನವನದ ಸ್ಥಳವನ್ನು ಬೇರೆ ತೋರಿಸಿಲ್ಲ ಅಂತ ಹೇಳಿದ್ದಾರೆ ಹಾಗೂ ದೂರುದಾರರು ಸೆಟಲೈಟ್ ಫೋಟೋ ಅನ್ನು ಹಾಜರುಪಡಿಸಿದ್ದಾರೆ.

8. ಶ್ರೀ ಗೋಪಾಲ ಎನ್ನುವವರು ನಿರ್ಮಿಸಿರುವ ಮನೆ ರಸ್ತೆಯ ಪಕ್ಕದಲ್ಲಿಯೇ ಇದೆ. ಅದೇ ಉದ್ಯಾನವನಕ್ಕೆ ಮೀಸಲಾದ ಸ್ಥಳವಾಗಿದೆ ಎಂದು ಹೇಳುತ್ತಿದ್ದಾರೆ. ಖಾಸಗಿ ವ್ಯಕ್ತಿಯಾದ ಗೋಪಾಲ ಮತ್ತು ರಂಗನಾಥ ರವರ ಮೇಲೆ ಲೋಕಾಯುಕ್ತ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ. ಮುಖ್ಯಾಧಿಕಾರಿಗಳು ಮತ್ತು ತಹಶೀಲ್ದಾರರು ಮಕ್ಕಳ ಉದ್ಯಾನವನ ಸ್ಥಳ ತಹಶೀಲ್ದಾರ ಕಛೇರಿ ಕಂಪೌಂಡ ಒಳಗಡೆ ಬರುತ್ತದೆ ಅಂತ ವರದಿಯನ್ನು ಸಲ್ಲಿಸಿರುವುದರಿಂದ ಮತ್ತು ಅನುದಾನದ ಕೊರತೆಯಿಂದ ಮಕ್ಕಳ ಉದ್ಯಾನವನ ನಿರ್ಮಿಸಿಲ್ಲ ಅಂತ ಹೇಳುತ್ತಿದ್ದದ್ದರಿಂದ ಸದರಿ ಜಾಗದಲ್ಲಿ ಒತ್ತುವರಿ ಆಗುವುದನ್ನು ತಪ್ಪಿಸಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿ ಮಕ್ಕಳ ಉದ್ಯಾನವನ್ನು ನಿರ್ಮಿಸುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.